ವಂಧ್ಯಪುರುಷರಾಗಿದ್ದರೂ ಮಾತೃಭಾಷೆಯನ್ನು ಎತ್ತಿಹಿಡಿದಿದ್ದು, ಮುಂದಿನವರಿಗೆ ಮಾದರಿಯಾಯಿತು. ರಾಮರಾಜ್ಯಕ್ಕೆ ತಳಹದಿಯಾಯಿತು. ಅಸಾಮಾನ್ಯವಾದ ಜೀವನದ ಕೀಲುಗಳನ್ನೆಲ್ಲ ಸಾಮಾನ್ಯರಿಗೆ ತಿಳಿಸಲು ಜನಸಾಮಾನ್ಯರ ನುಡಿಯನ್ನೇ ಒಳಗೊಂಡಿದ್ದ ಸರ್ವಸಾಮಾನ್ಯವಾದ ಸಂಗತಿ.

ಬಾಪು: ಎಂಟು ನೂರು ವರುಷಗಳ ಹಿಂದೆ ಕೃಷಿಮಾಡಿದ ನಿಮ್ಮ ಕನ್ನಡದ ಕ್ಷೇತ್ರದಲ್ಲಿ ಈ ಇಪ್ಪತ್ತನೆಯ ಶತಮಾನದಲ್ಲಿ ಅದೆಂಥ ಉತ್ತಮಾಂಶಗಳು ಅಂಕುರಿಸಿವೆಯೆಂಬುದನ್ನು ನಾನು ಕಂಡಿದ್ದೇನೆ. ಕಲ್ಯಾಣವು ಕಟಗೇರಿಯಾಗಿದ್ದರೂ, ಕಲ್ಯಾಣರಾಜ್ಯವು ಕಣ್ಮರೆಯಾಗಿದ್ದರೂ, ನಿಮ್ಮ ಕನ್ನಡದ ಹೊಲದಲ್ಲಿ ಬೀಜ ಹಾಕದೆ ನಾಟಿಗೆಗಳು ಕಾಣಿಸಿಕೊಳ್ಳುತ್ತಿವೆ. ನಾನು ಕನಸು ಕಾಣುತ್ತಿರುವ ರಾಮರಾಜ್ಯವು ಕರ್ನಾಟಕದಲ್ಲಿ ಅಂಕುರಿಸಿದ್ದನ್ನು ಎಂದೋ ಮನಗಂಡಿದ್ದೇನೆ. ಅದೆಲ್ಲ ನಿಮ್ಮ ದುಡಿತದ ಫಲವೇ ಆಗಿದೆ.

ಅಣ್ಣ: ಪುಟ್ಟ ಕೈ, ಚಿಕ್ಕ ಕ್ಷೇತ್ರ, ಅಲ್ಪಾಯುಷ್ಯಗಳಿಂದ ಅತ್ಯವಸರದಲ್ಲಿ ಮಾಡಿದ ಕ್ಷುದ್ರಸಾಹಸವನ್ನು ಅದೆಷ್ಟು ಬೆಳೆಸಿ ಹೇಳುವಿರಿ? ಸಣ್ಣ ಬಾಯಿಂದ ದೊಡ್ಡ ತುತ್ತು ನುಂಗುವ ಹಪಾಪಿಯೊಂದಿಲ್ಲದಿದ್ದರೆ ನೀವು ಹೇಳಿದಂತೆ ಮಾಡಿದ್ದೆಲ್ಲ ಮಾಟವಾಗುತ್ತಿತ್ತು. ಹಿಡಿದಿದ್ದೆಲ್ಲ ಹೊನ್ನು ಆಗುತ್ತಿತ್ತು. ರಾಜಕಾರಣದ ಕಠಿಣ ಶಿಲೆಯನ್ನು ಪಾದಸ್ಪರ್ಶದಿಂದ ಅಹಲ್ಯೆಯನ್ನಾಗಿ ನಿಲ್ಲಿಸಿದ ನಿಮ್ಮ ಅಗಾಧ ಪವಾಡಕ್ಕೆ ಜಗತ್ತೇ ಬೆಕ್ಕಸಬೆರಗಾಗಿದೆ.

ಬಾಪು: ಸಂಗಮನಾಥನು ಮತಹಾಕಿ ನಿಮ್ಮನ್ನು ಮಂತ್ರಿಯನ್ನಾಗಿ ಮಾಡಿದನು. ಸಾರ್ವಜನಿಕರ ಮನವೊಲಿಸಿ ಗಳಿಸಿದ ಮತಗಳಿಂದ ನೀವು ಮಂತ್ರಿ ಆಗಲಿಲ್ಲ. ಒಂದು ಧರ್ಮವನ್ನು ಮುಂದೆ ಮಾಡಿ ಸಮಾಜವನ್ನೂ, ರಾಜಕಾರಣವನ್ನೂ ಅಗಾಧವಾದ ಎತ್ತರದಲ್ಲಿ ನಿಲ್ಲಿಸುವುದಕ್ಕೆ ನೀವು ಸಮರ್ಥರಾದ್ದರಿಂದ ರಾಷ್ಟ್ರವು ಜ್ಯಾತ್ಯತೀತ ಸ್ವರೂಪವನ್ನು ತಾಳುವುದು ಸಾಧ್ಯವಾಯಿತು. ಧರ್ಮವನ್ನು ಬಿಟ್ಟರೆ ಜಾತಿಯನ್ನು ಹಿಡಿದಂತೆಯೇ ಆಗುತ್ತದೆ. ಧರ್ಮವನ್ನವಲಂಬಿಸದ ರಾಷ್ಟ್ರವು ಜಾತ್ಯತೀತವಾಗದೆ ಧರ್ಮಾತೀತವೇ ಆಗುತ್ತದೆಂಬುದನ್ನು ಇಂದಿನ ರಾಜಕಾರಣಿಗಳು ಮನಗಾಣಬೇಕಾಗಿದೆ.

ಅಣ್ಣ: ರಾಜಕಾರಣದಲ್ಲಿ ಕೈಹಾಕಿ ಸುಟ್ಟುಕೊಳ್ಳದೆ ಉಳಿದವರು ಮತ್ತೊಬ್ಬರು ಸಿಗುವುದು ಸಾಧ್ಯವಿಲ್ಲ. ಅಲ್ಲಿ ದುಡ್ಡಿನ ದೆವ್ವ ಮನೆಮಾಡಿರುತ್ತದೆ; ಅಧಿಕಾರದ ಬೇತಾಳವು ಬೇರುಬಿಟ್ಟಿರುತ್ತದೆ. ದುಡ್ಡಿನ ದೆವ್ವ ಬಡಿಯದಂತೆ ಅರ್ಧ ಬತ್ತಲೆಯ ಫಕೀರರಾಗಿ ನಿಂತಿರಿ. ಅಧಿಕಾರದ ಬೇತಾಳವನ್ನು ವಶಪಡಿಸಿಕೊಳ್ಳುವ ನಿತ್ಯ ಪ್ರಾರ್ಥನೆಯ ಮಂತ್ರ ಕಲಿತಿದ್ದಿರಿ, ಮೌನೋಪವಾಸದ ಬಲಿಯನ್ನಿತ್ತು ಬೇತಾಳವನ್ನು ಈಲುಮಾಡಿಕೊಂಡಿರಿ.

ಬಾಪು: ಆದರೂ ನನ್ನಲ್ಲಿ ದುಡ್ಡಿನ ಬಗ್ಗೆ ಒಂದಿಷ್ಟು ಅಹಂಕಾರವಿದ್ದೇ ಇತ್ತೆಂದು ಒಪ್ಪಿಕೊಳ್ಳದೆ ನಿರ್ವಾಹವಿಲ್ಲ, ನಿಧಿಕೂಡಿಸುವಾಗ, ಪುಷ್ಪಮಾಲೆ ಲಿಲಾವಿಗೆ ಹಿಡಿದಾಗ ಅದು ತಲೆಯೆತ್ತುವುದು ಅನುಭವಕ್ಕೆ ಬರುತ್ತಿತ್ತು. ಕಳ್ಳನನ್ನು ಕಂಡಾಗ ತನ್ನನ್ನು ಬಲುಗಳ್ಳನೆಂದು ಬಗೆಯುವುದಾಗಲಿ, ಆಕಳು ಕದ್ದವರಿಗೆ ಕರುವನ್ನೂ ಒಪ್ಪಿಸಿಬನ್ನಿರೆಂದಾಗಲಿ–ನಿಲುಮೆ ಅಧಿಕಾರಪದದಲ್ಲಿರುವವರಿಗೆ ಬರಬೇಕಾಗಿದೆ. ಬದನೆಕಾಯಿ ಕಟ್ಟಿಕೊಂಡು ಲಿಂಗಾಯತನ ವೇಷ ಧರಿಸಿದವನನ್ನು ಜಂಗಮನನ್ನಾಗಿಯೇ ಮಾಡಿಬಿಡುವ ಪ್ರಭಾವವಿಲ್ಲದಿದ್ದರೆ, ನಿಮ್ಮ ಮಂತ್ರಿಪದವು ಎಂದೋ ಉರುಳಿಹೋಗುತ್ತಿತ್ತು.

ಅಣ್ಣ: ಹಿಂಸೆಯನ್ನು ಪ್ರೇಮದಿಂದ, ಅಸತ್ಯವನ್ನು ಸತ್ಯದಿಂದ ಗೆಲ್ಲುವ ನಿರ್ಧಾರವು ಆತ್ಮವೀರನಿಗೆ ಮಾತ್ರ ಬರಲು ಸಾಧ್ಯವಿದೆ. ಭೌತವಿಜ್ಞಾನವು ತಿಣಿತಿಣಿಕಿ ಶೋಧಿಸಿ ತೆಗೆದ ಆತ್ಮಘಾತುಕಗಳಾದ ಶಸ್ತ್ರಾಸ್ತ್ರಗಳು ಜಗತ್ತಿನ ಎದೆಯನ್ನಿರಿಯಲು ತವಕಿಸುತ್ತಿರುವಾಗ, ಆತ್ಮವಿಜ್ಞಾನದಿಂದ ಕಂಡುಹಿಡಿದ ಸತ್ಯ–ಅಹಿಂಸೆಗಳ ಶಸ್ತ್ರಾಸ್ತ್ರಗಳನ್ನು ಧೈರ್ಯದಿಂದ ಉಪಯೋಗಿಸಿ ರಾಜಕಾರಣದಲ್ಲಿ ಹೊಸ ಯುಗವನ್ನೇ ಆರಂಭಿಸಿದಿರಿ. ನಿಮ್ಮ ಆಯುಧಗಳನ್ನು ಧರಿಸಿದವನು ಸೋತರೂ ಗೆದ್ದಂತೆಯೇ. ಅವುಗಳಿಂದ ಎದುರಾಳಿಗೂ ಸೋಲಿಲ್ಲ. ಪಕ್ಷ ಪ್ರತಿಪಕ್ಷಗಳೆರಡಕ್ಕೂ ವಿಜಯವನ್ನು ನೀಡುವ ನಿಮ್ಮ ನವೀನ ಯುದ್ಧಕಲೆಯು ಜಗತ್ತಿಗೆ ದೊರೆತ ಮಹಾದಾನವಾಗಿದೆ.

ಬಾಪು: ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳೂ, ಏಳು ನೂರಾ ಎಪ್ಪತ್ತು ಅಮರ ಗಣಂಗಳೂ ನೀವು ರಚಿಸಿದ ದಿವ್ಯ ಸಮಾಜಕ್ಕೆ ಜೀವತಂತುಗಳಾಗಿದ್ದವು. ಅವುಗಳಿಗೆ ಅನುಭವಮಂಟಪವು ಜೀವಕಳೆಯನ್ನು ನೀಡುತ್ತಿತ್ತು.